ಚಳಿಗಾಲ್ದಾಗೂ ದೂಧ್ ಸೋಡಾ ಬಿಡಾಂಗಿಲ್ಲ... ನಾವಂತೂ ಆ ಮೂಲ್ಯಾಗ್ ಇರೋ ಸೋಡಾ ಅಂಗಡಿಯಿಂದ ಡಜನ್‌ಗಟ್ಟಲೆ ಸೋಡಾ ಬಾಟಲ್ ತರಿಸ್ತೀವಿ...''

''ದೂಧ್ ಸೋಡಾ!?'' ಕಾವ್ಯಾ ಅತ್ಯಂತ ಆಶ್ಚರ್ಯಚಕಿತಳಾಗಿ, ಜೀವನದಲ್ಲಿ ಇದೇ ಮೊದಲನೇ ಬಾರಿಗೆ ಈ ಶಬ್ದವನ್ನು ಕೇಳಿದವಳಂತೆ ಉದ್ಗರಿಸಿದಳು.

''ಹ್ಞಾ... ದೂಧ್ ಸೋಡಾ...'' ಮತ್ತೊಮ್ಮೆ ಅದೇ ಶಬ್ದವನ್ನು ಉಚ್ಚರಿಸಿದಳು ಅವ್ವ. ''ಮೈನ ಎಲ್ಲಾ ಗರ್ಮೀನೂ ಒಂದೇ ಸಲ ಕಿತ್ತಾಕ್ ಬಿಡ್ತದ...''

''ದೂಧ್ ಸೋಡಾ...!? ಏನಂದ್ರೀ ನೀವು?''

''ನಾನೂ ಅದ್ನೇ ಹೇಳೀನಿ... ದೂಧ್ ಸೋಡಾ...'' ಅವ್ವ ಮತ್ತೊಮ್ಮೆ ಅದನ್ನೇ ಹೇಳಿದಳು, ಅವಳಿಗೆ ಅರ್ಥ ಮಾಡಿಸುವಂತೆ.

''ಉಫ್! ನನಗಂತೂ ತಲೆ ಚಕ್ಕರ್ ಬಂದ ಹಾಗೆ ಆಗ್ತಿದೆ!'' ಅಷ್ಟು ಹೇಳಿದ ಕಾವ್ಯಾ ತನ್ನ ತಲೆಯನ್ನು ಎರಡೂ ಕೈಗಳಿಂದ ಒತ್ತಿ ಹಿಡಿದುಕೊಂಡು, ಮುಖವನ್ನು ಕೆಳಕ್ಕೆ ಬಾಗಿಸಿದಳು.

''ತಲೆ ಸುತ್‌ತೈತಿ? ಹಂಗಾರ ಶೇಂಗಾ ರಸ ಮತ್ತ ಸೋರೆಕಾಯಿ ರಸಾನ ಫ್ರಿಜ್‌ನಾಗ ಇಟ್ಟೀನಿ. ಅವೆರಡ್ನೂ ಮಿಕ್ಸ್ ಮಾಡಿ, ಕೊಬ್ಬರಿ ಎಣ್ಣಿ ಸೇರ್ಸಿ ತಗೊಂಬರ್ತೀನಿ ಇರು... ತಲೆಗೆ ಹಚ್ಚಿದ್ರ ಎಲ್ಲಾ ಸರಿ ಹೋಕ್ಕೈತಿ...'' ಹೇಳಿದ ಅವ್ವ ಅಡುಗೆಮನೆಯತ್ತ ನಡೆದಳು.

ಈಗ ಹಾಲ್‌ನಲ್ಲಿ ಉಳಿದವರು ನಾವಿಬ್ಬರೇ... ನಾನು ಮತ್ತು ಕಾವ್ಯಾ! ಅದೇ ಕ್ಷಣದಲ್ಲಿ ಕಾವ್ಯಾ ತನ್ನೆರಡೂ ಕೈಗಳನ್ನು ಬಾಯಿಯ ಮೇಲೆ ಇಟ್ಟುಕೊಂಡು ಬಿಕ್ಕಿಬಿಕ್ಕಿ ಅಳತೊಡಗಿದಳು. ಅವಳ ಸ್ಥಿತಿಯನ್ನು ನೋಡಿ ನಾನು ಅಯೋಮಯನಾದೆ. ಏನು ಮಾಡಬೇಕೆಂದು ತೋಚಲಿಲ್ಲ. ಆಕೆಯನ್ನು ಸಮಾಧಾನಿಸುವ ಉದ್ದೇಶದಿಂದ ಹೇಳಿದೆ, ''ನಿಮ್ಮ ವಿರುದ್ಧ ನನ್ನದೇನೂ ಆಕ್ಷೇಪವಿಲ್ಲ... ಎಲ್ಲವನ್ನೂ ಮರೆಯುವ ಪ್ರಯತ್ನ ಮಾಡ್ತಿದ್ದೀನಿ. ದಯವಿಟ್ಟು ಗಂಗಾ ಯಮುನಾ ನದಿಯನ್ನು ನಿಲ್ಲಿಸಿ... ಅನರ್ಥವಾದೀತು...''

ಆಕೆ ಮುಖವನ್ನು ಮುಚ್ಚಿಕೊಂಡಿದ್ದ ಕೈಗಳನ್ನು ಸರಿಸಿ ನನ್ನನ್ನು ದಿಟ್ಟಿಸಿ ನೋಡಿದಳು. ಗಾಬರಿ, ಅತಂಕ, ಭಯ... ನನಗೆ ಮೋಸವಾದ ಬಗ್ಗೆ ನಾನೇನಾದರೂ ಹೇಳಿಬಿಡುತ್ತೇನೆ ಎನ್ನುವ ಯೋಚನೆಯೇ!? ಒಂದೂವರೆ ತಾಸುಗಳ ಕಾಲ ಇದರ ಬಗ್ಗೆ ಏನನ್ನೂ ಹೇಳದೇ ಇರುವ ನಾನು ಜ್ವಾಲಾಮುಖಿಯ ಹಾಗೆ ಎಲ್ಲ ಕೆಂಡಗಳನ್ನೂ ಒಮ್ಮೆಲೇ ಕಕ್ಕಿಬಿಡುತ್ತೇನೆ ಎನ್ನುವ ಭಾವನೆಯೇ!? ತಿಳಿಯದು. ಒಮ್ಮೆ ಆಕೆಯ ಕಣ್ಣುಗಳನ್ನೇ ಸೂಕ್ಷ್ಮವಾಗಿ ಗಮನಿಸಿದೆ. ಆ ಕಣ್ಣುಗಳ ಬಣ್ಣವೇ ಅಲ್ಲವೇ ನನ್ನನ್ನು ನಿರಂತರವಾಗಿ ಕಟ್ಟಿಹಾಕುವ ಪ್ರಯತ್ನ ನಡೆಸಿದ್ದು. ಅಲ್ಲಿಂದಲೇ ಅಲ್ಲವೇ ನನ್ನ ಬದುಕಿನಲ್ಲಿ ಹೊಸದೊಂದು ಅಧ್ಯಾಯ ಆರಂಭವಾಗಿದ್ದು! ಅವುಗಳನ್ನು ನೋಡಿಯೇ ಅಲ್ಲವೇ ನನ್ನಲ್ಲಿ ಕನಸುಗಳು ಕುಣಿದಾಡತೊಡಗಿದ್ದು! ಒಮ್ಮೆಲೇ ನಾಲ್ಕಾರು ರೆಕ್ಕೆಗಳು ಮೂಡಿದ ಅನುಭವ! ಆಗಲೇ ಮನಸ್ಸು ಎಚ್ಚರಿಸಿತು, 'ಈಕೆ ಈಗ ಬೇರೆಯವರಿಗೆ ಸೇರಿದವಳು... ಈ ಕಣ್ಣುಗಳ ಸುಗಂಧವನ್ನು ಸವಿಯುವ ಯಾವುದೇ ಅಧಿಕಾರ ಈಗ ನಿನಗಿಲ್ಲ...'

ನಿಧಾನವಾಗಿ ನನ್ನೆರಡೂ ತುಟಿಗಳು ಅದುರಿದವು. ''ಕಾವ್ಯಾ, ಏಕೆ ಹೀಗಾಯಿತು!? ಹೇಗಿದ್ದೀಯಾ?''

''ಕಾವ್ಯ ಇಟ್ಟಿಗೆಯ ಭಟ್ಟಿಯ ಅಡಿಯಲ್ಲಿ ಹುದುಗಿಹೋಗಿದೆ!''

''ನಾನು ಕಳೆದ ವರ್ಷ ಭೇಟಿಯಾದಾಗ ಕಾವ್ಯವು ರಾಗದೊಂದಿಗೆ ಬೆರೆಯುವ ತುಡಿತದಲ್ಲಿತ್ತು. ನನ್ನೆದೆಯಲ್ಲಿ ಸುಮಧುರ ಗಾಯನಕ್ಕೆ ವೇದಿಕೆ ಸಿದ್ಧವಾಗಿತ್ತು. ಆದರೆ, ಇಟ್ಟಿಗೆಯ ಭಟ್ಟಿ ಅದೆಲ್ಲಿಂದ ಪ್ರತ್ಯಕ್ಷವಾಯಿತು?''